

# ಉಜ್ವಲ ಪ್ರಜ್ವಲ್

ಪ್ರಜ್ವಲ್ ದೇವರಾಜ್ ಸಿನಿಮಾಗಳ ಪಟ್ಟಿಯೇನೋ ದೊಡ್ಡದಾಗಿಯೇ ಇದೆ. ಆದರೆ ಅವುಗಳಲ್ಲಿ ಹಿಟ್ ಗೆರೆ ದಾಟಿದ ಚಿತ್ರಗಳು ವಿರಳವೇ. ಬ್ಲಾಕ್‌ಬಾಸ್ಟರ್‌ನ ಸ್ವಾದ ಇನ್ನೂ ಪ್ರಜ್ವಲ್‌ಗೆ ಮರೀಚಿಕೆಯಾಗಿಯೇ ಉಳಿದಿದೆ. ಹಾಗಂತ ಅವರಿಗೆ ಅವಕಾಶಗಳಿಗೆ ಕೊರತೆ ಎಂದೂ ಬಂದಂತಿಲ್ಲ.

ಇದೀಗ ಪ್ರಜ್ವಲ್ ತಮ್ಮ ವೃತ್ತಿಜೀವನದ ಮತ್ತೊಂದು ಮಗ್ಗುಲಿಗೆ ಜಿಗಿಯುವ ಸಿದ್ಧತೆಯಲ್ಲಿ ಇದ್ದಂತೆ ಕಾಣುತ್ತಿದೆ. ಈ ಪ್ರಯತ್ನದ ಸೂಚನೆಯನ್ನು ಅವರು ಒಪ್ಪಿಕೊಂಡು ನಟಿಸುತ್ತಿರುವ ಸಿನಿಮಾಗಳಲ್ಲಿಯೇ ನೋಡಬಹುದು. 'ಇನ್‌ಸ್ಪೆಕ್ಟರ್ ವಿಕ್ರಮ್' ಚಿತ್ರದಲ್ಲಿ ಅವರು ಖಾಕಿ ತೊಟ್ಟು ಖದರ್ ತೋರಿಸಿದ್ದಾರೆ. ತೆಳುವಾದ ಹಾಸ್ಯಲೇಪವಿರುವ ಖಾಕಿ ಕಥೆಯಲ್ಲಿ ಪ್ರಜ್ವಲ್ ಗೆಟಪ್ ರಿವೀಲ್ ಮಾಡುವ ಟೀಸರ್ ಸಾಕಷ್ಟು ಮೆಚ್ಚುಗೆ ಪಡೆದಿತ್ತು. ಬಿಡುಗಡೆಗೆ ಸಜ್ಜಾಗುತ್ತಿರುವ ಇನ್ನೊಂದು ಚಿತ್ರ 'ಜಂಟಲ್‌ಮನ್'. ಈ ಚಿತ್ರದಲ್ಲಿ ಪ್ರಜ್ವಲ್ ಸ್ಲೀಪಿಂಗ್ ಸಿಂಡ್ರೋಮ್ ಇರುವ, ಸಮಾಜದಲ್ಲಿ ಜಂಟಲ್‌ಮನ್ ಆಗಿ ಕಾಣಿಸಿಕೊಳ್ಳಲು ಹೆಣಗುವ ಹುಡುಗನಾಗಿ ಕಾಣಿಸಿಕೊಂಡಿದ್ದಾರೆ. ಇದರ ಜೊತೆಗೇ 'ಅರ್ಜುನ್ ಗೌಡ' ಎನ್ನುವ ಮತ್ತೊಂದು ಸಿನಿಮಾಕ್ಕೂ ಸಹಿ ಹಾಕಿದ್ದಾರೆ. ಮೊದಲಿನ ಎರಡು ಚಿತ್ರಗಳಂತೂ ಇದೇ ವರ್ಷದಲ್ಲಿ ತೆರೆಗೆ ಬರುವುದು ಖಚಿತ. ಇವುಗಳ ಜೊತೆಗೆ ಇನ್ನೂ ಹೆಸರು ಬಹಿರಂಗಪಡಿಸದ ಎರಡು ಚಿತ್ರಗಳನ್ನು ಅವರು ಒಪ್ಪಿಕೊಂಡಿದ್ದಾರಂತೆ.

ಕೈಯಲ್ಲಿ ಐದು ಚಿತ್ರಗಳನ್ನು ಇಟ್ಟುಕೊಂಡಿರುವ ಪ್ರಜ್ವಲ್‌ಗೆ ಅವುಗಳಲ್ಲಿ ಒಂದೆರಡಾದರೂ ತನ್ನ ಭವಿಷ್ಯವನ್ನು ಉಜ್ವಲಗೊಳಿಸಬಹುದು ಎಂಬ ನಂಬಿಕೆ. ಅದರಲ್ಲಿಯೂ 'ಇನ್‌ಸ್ಪೆಕ್ಟರ್ ವಿಕ್ರಮ್' ಚಿತ್ರದ ಪಾತ್ರ ತಮ್ಮ ಬಣ್ಣದ ಬದುಕನ್ನು ಇನ್ನಷ್ಟು ಪ್ರಜ್ವಲಗೊಳಿಸುತ್ತದೆ ಎಂಬ ವಿಶ್ವಾಸದಲ್ಲಿ ಅವರಿದ್ದಾರೆ. ■

# ಕನ್ನಡದ ಕಾಮ್ರೇಡ್



ವಿಜಯ ದೇವರಕೊಂಡ ಮತ್ತು ರಶ್ಮಿಕಾ ಮಂದಣ್ಣ ನಟಿಸಿದ್ದ ತೆಲುಗಿನ 'ಡಿಯರ್ ಕಾಮ್ರೇಡ್' ಇದೇ 26ಕ್ಕೆ ಮತ್ತೆ ಕನ್ನಡದಲ್ಲಿ ಬರುತ್ತಿದ್ದಾನೆ. ಅಂದರೆ 'ಡಿಯರ್ ಕಾಮ್ರೇಡ್' ಸಿನಿಮಾದ ಡಬ್ಬಿಂಗ್ ಆವೃತ್ತಿ ಬಿಡುಗಡೆಯಾಗುತ್ತಿದೆ.

ಇದುವರೆಗೆ ಕನ್ನಡದಲ್ಲಿ ಬಿಡುಗಡೆಯಾದ ಡಬ್ಬಿಂಗ್ ಸಿನಿಮಾಗಳಿಗೆ ಸಿಕ್ಕಿರುವ ಸ್ಪಂದನ ಅಷ್ಟಕ್ಕಷ್ಟೆ. ಹಾಗಂತ ಬೇರೆ ಭಾಷೆಯ ಸಿನಿಮಾಗಳನ್ನು ಕನ್ನಡಕ್ಕೆ ಡಬ್ ಮಾಡಿ ಬಿಡುಗಡೆ ಮಾಡುವ ಪ್ರಯತ್ನಗಳೇನೂ ಕಮ್ಮಿಯಾಗಿಲ್ಲ. ಆ ಪ್ರಯತ್ನದ ಮತ್ತೊಂದು ಹೆಜ್ಜೆಯೇ 'ಡಿಯರ್ ಕಾಮ್ರೇಡ್' ಕನ್ನಡ ಆವೃತ್ತಿ.

ಮೈತ್ರಿ ಮೂವಿ ಮೇಕರ್ಸ್ ಸಂಸ್ಥೆ ಈ ಚಿತ್ರವನ್ನು ಕನ್ನಡಕ್ಕೆ ತಂದಿದೆ. ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಟ್ರೇಲರ್ ಅನ್ನೂ ಬಿಡುಗಡೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಕನ್ನಡದ ಸ್ಟಾರ್ ನಟ ಯಶ್ ಭಾಗವಹಿಸಿದ್ದು, ಚಿತ್ರರಂಗದಲ್ಲಿ ಡಬ್ಬಿಂಗ್ ವಿರುದ್ಧದ ಧ್ವನಿ ಸಂಪೂರ್ಣ ಉಡುಗಿಹೋಗಿರುವುದರ ಸೂಚನೆಯಂತೆಯೂ ಇತ್ತು. 'ಡಿಯರ್ ಕಾಮ್ರೇಡ್' ನಾಯಕಿ, ಕನ್ನಡತಿ ರಶ್ಮಿಕಾ ಮಂದಣ್ಣ ತಮ್ಮ ಪಾತ್ರಕ್ಕೆ ತಾವೇ ಡಬ್ ಮಾಡಿದ್ದಾರೆ. ನಾಯಕ ವಿಜಯ ದೇವರಕೊಂಡ ಅವರ ಪಾತ್ರಕ್ಕೆ ಬೇರೆಯವರಿಂದ ಡಬ್ ಮಾಡಿಸಲಾಗಿದೆ. ಶರೀರ ಮತ್ತು ಶಾರೀರದ ಹೊಂದಾಣಿಕೆಯಿಲ್ಲದ ಪರಿಣಾಮ ಟ್ರೇಲರ್‌ನಲ್ಲಿ ನಿಚ್ಚಳವಾಗಿಯೇ ಕಾಣಿಸುವಂತಿದೆ.

'ಡಿಯರ್ ಕಾಮ್ರೇಡ್' ಚಿತ್ರದ ಕನ್ನಡ ಅವತರಣಿಕೆಯನ್ನು ಎಷ್ಟು ಜನ ನೋಡುತ್ತಾರೋ ಗೊತ್ತಿಲ್ಲ. ಆದರೆ ಇದು ಬೇರೆ ಭಾಷೆಗಳ ಚಿತ್ರಗಳು ಕನ್ನಡದ ಮಾತು ಹೊತ್ತುಕೊಂಡು ಬರಲು ರೂಪಿಸುತ್ತಿರುವ ದಾರಿಯನ್ನು ಇನ್ನಷ್ಟು ಸಾಪುಗೊಳಿಸುವುದಂತೂ ಸತ್ಯ. ■